for more materials visit www.educationobserver.com/forum

**Series SKS**

**Code No. 15**

Roll No. | | | | | | | |

Candidates must write the Code on the title page of the answer-book.

- Please check that this question paper contains **8** printed pages.
- Code number given on the right hand side of the question paper should be written on the title page of the answer-book by the candidate.
- Please check that this question paper contains **17** questions.
- **Please write down the Serial Number of the question before attempting it.**
- 15 minutes time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period.

# ಕನ್ನಡ

# KANNADA

*ಅನುಮತಿಸಲಾದ ಸಮಯ : 3 ಗಂಟೆ*
*Time allowed : 3 hours*

*ಗರಿಷ್ಠ ಅಂಕಗಳು : 100*
*Maximum Marks : 100*

***ಸೂಚನೆಗಳು** : ಈ ಪ್ರಶ್ನೆ ಪತ್ರಿಕೆಯು A, B, C ಮತ್ತು D ಎಂಬ ನಾಲ್ಕು ಭಾಗಗಳನ್ನು ಒಳಗೊಂಡಿರುತ್ತದೆ.*

| | |
|---|---|
| ವಿಭಾಗ A – (ವ್ಯಾಕರಣ) | : 25 ಅಂಕಗಳು |
| ವಿಭಾಗ B – (ಅರ್ಥಗ್ರಹಿಕೆ) | : 10 ಅಂಕಗಳು |
| ವಿಭಾಗ C – (ಬರವಣಿಗೆ) | : 15 ಅಂಕಗಳು |
| ವಿಭಾಗ D – (ಪಠ್ಯಗಳ ಅಧ್ಯಯನ) | : 50 ಅಂಕಗಳು |

for more materials visit www.educationobserver.com/forum

## ವಿಭಾಗ A (ವ್ಯಾಕರಣ)

1. ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ :

   (i) ಕೆಳಗಿನ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ : *1*

   ಇದು ಜನರ ಜೀವನದ ಸ್ಥಿತಿಗತಿಯ ಹೃದಯಸ್ಪರ್ಶಿ ಶಬ್ದಚಿತ್ರ.

   (ii) ಕೆಳಗಿನ ವಾಕ್ಯವನ್ನು ನಿಷೇಧಾರ್ಥದಲ್ಲಿ ಬಳಸಿ : *1*

   ಈ ಕಥಾವಸ್ತು ರಾಮಾಯಣಕ್ಕೆ ಸಂಬಂಧಿಸಿದೆ.

   (iii) ಕೆಳಗಿನ ವಾಕ್ಯವನ್ನು ಸಾಮಾನ್ಯ ವಾಕ್ಯವನ್ನಾಗಿ ಪರಿವರ್ತಿಸಿ : *1*

   ಅನಕೃ ಅವರು ಉತ್ತಮ ಕಾದಂಬರಿಗಳನ್ನು ಬರೆದಿದ್ದರಿಂದ ತುಂಬಾ ಪ್ರಸಿದ್ಧರಾದರು.

   (iv) ಈ ಕೆಳಗಿನ ವಾಕ್ಯವನ್ನು ಭೂತಕಾಲದಲ್ಲಿ ಬರೆಯಿರಿ : *1*

   ಅವನ ಹಾಡುಗಾರಿಕೆ ಪ್ರೇಕ್ಷಕರ ಮನಸ್ಸನ್ನು ಸೆಳೆಯುತ್ತದೆ.

   (v) ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದವನ್ನು ಗುರುತಿಸಿ ಅದರ ಧಾತುವನ್ನು ತಿಳಿಸಿ : *1*

   ದೇಶಹಿತದ ಕಾರ್ಯಕ್ಕೆ ಪ್ರಥಮ ಆದ್ಯತೆ ನೀಡಬೇಕು.

2. ಕೆಳಗಿನ ಗದ್ಯಾಂಶವನ್ನು ಕನ್ನಡಕ್ಕೆ ರೂಪಾಂತರಿಸಿ : *5*

In general it is true that the man who knows has an advantage over the man who does not know. The educated classes have always been able to rule the ignorant. This can be illustrated in various ways.

Physically, man is one of the weakest of animals, without the wonderful tools he has invented. He cannot fly like the birds, he cannot run like the horse, he has no weapons of defence like the tiger's claws, and he is no match for the lion and bear in strength. Yet he conquers all these strong and fierce beasts, and forces some of them to be his servants. His superior intelligence and knowledge make him the master of creatures physically his superior.

for more materials visit www.educationobserver.com/forum

**3.** ಕೆಳಗಿನ ಯಾವುದಾದರೂ ಎರಡು ಪದ್ಯಗಳಿಗೆ ಪ್ರಸ್ತಾರ ಹಾಕಿ, ಗಣ ವಿಂಗಡಣೆ ಮಾಡಿ, ಛಂದಸ್ಸಿನ ಹೆಸರು ತಿಳಿಸಿ : $2\frac{1}{2}+2\frac{1}{2}=5$

(i) ತರುಣಿ ದುಶ್ಶಾಸನನ ನೊರೆನೆ
ತ್ತರಲಿ ನಾದುವೆ ನಿನ್ನ ಮಂಡೆಯ
ಕುರುಳ ಬಾಚುವೆನಿವನ ದಂತದ ಹಣಿಗೆಯಲಿಖಳನ.

(ii) ಆಡುವ ಗುಂಡಯ್ಯನ ಹೊಸ ನೃತ್ಯಂ
ನೋಡುವ ಶಿವನಂ ಮುಟ್ಟಿತು ಸತ್ಯಂ

(iii) ಕಡುಗಲಿ ತನಮುಂ ಚೌಗದ
ಪಡೆಮಾತುಂ ವಿದ್ಯೆಯುರ್ಕುಮೊರ್ವನೊಳೆಂತುಂ

(iv) ಸೊಗಯಿಸಿ ಬಂದ ಮಾಮರನೆ ತಳ್ಳಿಳೆವಳ್ಳಿಯೆ ಪೂತಜಾತಿಸಂ

**4.** ಕೆಳಗಿನ ಯಾವುದಾದರೂ ಎರಡು ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ : $2\frac{1}{2}+2\frac{1}{2}=5$

(i) ಕಬ್ಬು ಡೊಂಕಾದರೆ ಸಿಹಿ ಡೊಂಕೇ ?

(ii) ಗಾಳಿ ಬಂದಾಗ ತೂರಿಕೊ.

(iii) ಅರಮನೆಗಿಂತ ನೆರೆಮನೆ ಲೇಸು.

**5.** ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ :

(i) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ : 2

ಕಂಡಿಂತು, ಸಮರಾಕರ, ಕಣ್ಣಲಗೆ, ಯಾರೊಬ್ಬರೂ.

(ii) ಕೆಳಗಿನ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯ ತಿಳಿಸಿ : 1

ಅನಿಲತನೂಜನ, ದೆಸೆದೆಸೆಗೆ.

(iii) ಕೆಳಗಿನ ಕ್ರಿಯಾಪದಗಳ ಧಾತುಗಳನ್ನು ಬರೆಯಿರಿ : 2

ಪೋಗಿ, ಕೂಡಿ, ಮಾಡುತ್ತಿಪ್ಪ, ಹಿಡಿದುಕೊಂಡು.

for more materials visit www.educationobserver.com/forum

## ವಿಭಾಗ B (ಅರ್ಥಗ್ರಹಿಕೆ)

6. ಈ ಕೆಳಗಿನ ಗದ್ಯಭಾಗವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ :

ಪಶ್ಚಿಮದ ಜಡವಾದದ ಬಿರುಗಾಳಿ ಭಾರತಕ್ಕೂ ಕಳೆದ ಶತಮಾನದಿಂದ ಬೀಸತೊಡಗಿತ್ತು. ದೀರ್ಘಕಾಲದ ದಾಸ್ಯದಿಂದ ಅರ್ಥಹೀನ ಪರಾನುಕರಣಶೀಲತೆಯೂ ಭಾರತದಲ್ಲಿ ಮನೆಮಾಡಲು ಪ್ರಾರಂಭವಾಗಿತ್ತು. ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ತಂದುಕೊಡಲು ಹೋರಾಡಿದ ಧುರೀಣರು, ಸ್ವಂತ ವೈಶಿಷ್ಟ್ಯಗಳನ್ನು ಉಳಿಸಿಕೊಳ್ಳಲು ಸ್ವದೇಶಿ ಭಾವನೆಗಳಿಂದ ದುಡಿದರು. ಇಂದು ಆಡಳಿತದಲ್ಲಿ ಪ್ರಜಾಪ್ರಭುತ್ವ ವಿಧಾನವನ್ನು ಅಂಗೀಕರಿಸಿದ ಭಾರತದಂತಹ ಹಿರಿಯ ರಾಷ್ಟ್ರ ತನ್ನ ಅಭ್ಯುದಯದ ಪಥದಲ್ಲಿ ಎದುರಿಸಬೇಕಾದ ಸಮಸ್ಯೆಗಳು ಹಲವು ಎಂಬುದನ್ನು ಮನಗಾಣುತ್ತಿದೆ. ಜನರನ್ನು ಸಾಕ್ಷರರನ್ನಾಗಿ ಮಾಡುವ ಕಾರ್ಯವೇ ಎಷ್ಟು ಕಠಿಣ ಎಂಬುದು ಇದೀಗ ಮನವರಿಕೆಯಾಗುತ್ತಿದೆ. ಜನಮಾನಸದಲ್ಲಿ ಉದಾತ್ತ ವಿಚಾರಗಳನ್ನು ಬಿತ್ತಿ, ಉನ್ನತವಾದ ಜೀವನವನ್ನು ನಡೆಸಲು ತೀವ್ರ ಹಂಬಲವನ್ನುಂಟುಮಾಡುವ ನೈತಿಕ ಸಮುನ್ನತಿಯನ್ನು ಕುರಿತು ಪ್ರಚಾರ ಮತ್ತು ತರಬೇತಿ ಇನ್ನೂ ಕಠಿಣ ಕಾರ್ಯ ಎಂಬುದನ್ನು ಬೇರೆ ಹೇಳಬೇಕಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಸುಸಂಸ್ಕೃತರೂ, ವಿದ್ಯಾವಂತರೂ ಉನ್ನತ ಸ್ಥಾನದಲ್ಲಿರುವವರೂ ಸ್ವದೇಶ ಪ್ರೇಮದಿಂದ ಪ್ರೇರಿತರಾಗಿ ಬ್ರಿಟಿಷರ ಗುಂಡಿನೇಟಿಗೆ ಬೆದರದೆ ತಮ್ಮ ಹೃದಯದ ಬಿಸಿರಕ್ತವನ್ನು ಬಸಿಯಲು ಸಿದ್ಧರಾದರು. ಮನೆ ಮಾರುಗಳನ್ನು ಕಳೆದುಕೊಂಡು ಜೈಲುವಾಸ ಮಾಡಿದರು. ಅಂದು ಅವರು ಅನುಷ್ಠಾನ ಮಾಡಿದ ತ್ಯಾಗ ಮತ್ತು ಸೇವೆಯ ಆದರ್ಶಗಳನ್ನು ನಂತರದ ಮುಖಂಡರೂ, ಜನರೂ ಬಹುಬೇಗನೆ ಮರೆಯುತ್ತ ಬಂದರು.

*ಪ್ರಶ್ನೆಗಳು :*

(i) ಕಳೆದ ಶತಮಾನದಲ್ಲಿ ಭಾರತಕ್ಕೂ ಬೀಸಿದ ಬಿರುಗಾಳಿ ಯಾವುದು ? *1*

(ii) ಸ್ವದೇಶಿ ಭಾವನೆಯಿಂದ ಪ್ರಭಾವಿತರಾಗಿ ದುಡಿದವರು ಯಾರು ? ಏಕೆ ? *2*

(iii) ಭಾರತ ಇಂದು ತನ್ನ ಆಡಳಿತದಲ್ಲಿ ಎಂತಹ ವಿಧಾನವನ್ನು ಅಂಗೀಕರಿಸಿದೆ ? *1*

(iv) ಅಭ್ಯುದಯದ ಪಥದಲ್ಲಿ ಸಾಗುತ್ತಿರುವ ಭಾರತದ ಮುಂದಿರುವ ಕಠಿಣ ಕಾರ್ಯಗಳು ಯಾವುವು ? *2*

for more materials visit www.educationobserver.com/forum

7. ಕೆಳಗಿನ ಗದ್ಯಭಾಗವನ್ನು ಓದಿ ಅದರ ಮುಖ್ಯಾಂಶಗಳನ್ನು ಸಂಕ್ಷೇಪಿಸಿ ಬರೆಯಿರಿ : *4*

ನರಸನಾಯಕನಿಗೆ ಇಬ್ಬರು ಮಕ್ಕಳು. ವೀರ ನರಸಿಂಹ ಮತ್ತು ಕೃಷ್ಣದೇವರಾಯ. ಸಾಳ್ವವಂಶದ ಇಮ್ಮಡಿ ನರಸಿಂಹನನ್ನು ಕೊಂದು ರಾಜನಾದ ವೀರ ನರಸಿಂಹ 1505 ರಿಂದ 1508 ರವರಿಗೆ ಮಾತ್ರ ರಾಜ್ಯವಾಳಿದ. ಈತನ ಆಳ್ವಿಕೆಯ ಪ್ರಾರಂಭದ ದಿನಗಳು ಕಷ್ಟಕರವಾಗಿದ್ದವು. ರಾಜನನ್ನು ಕೊಂದು ಪಟ್ಟಕ್ಕೆ ಬಂದುದರಿಂದ ಅನೇಕ ಕಡೆಗಳಲ್ಲಿ ವಿರೋಧವನ್ನು ಎದುರಿಸಬೇಕಾಯಿತು. ಉಮ್ಮತ್ತೂರು ಮತ್ತು ಶ್ರೀ ರಂಗಪಟ್ಟಣದ ಪಾಳೆಯಗಾರರು ಪ್ರಬಲವಾದ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಉಮ್ಮತ್ತೂರನ್ನು ವಶಪಡಿಸಿಕೊಳ್ಳಲು ಮುತ್ತಿಗೆಯನ್ನು ಹಾಕಿ ಅಲ್ಲಿ ಸೋಲನ್ನನುಭವಿಸಬೇಕಾಯಿತು. ಶ್ರೀರಂಗ ಪಟ್ಟಣದಲ್ಲಿಯೂ ಅದೇ ಗತಿಯಾಯಿತು. ತುಳುದೇಶದಲ್ಲಿ ಲಭಿಸಿದ ಸಣ್ಣಪುಟ್ಟ ಜಯಗಳಿಂದ ತೃಪ್ತನಾಗಿ ಹಿಂದಿರುಗಬೇಕಾಯಿತು. ಮತ್ತೊಮ್ಮೆ ಉಮ್ಮತ್ತೂರನ್ನು ಮುತ್ತಬೇಕೆಂಬ ಸನ್ನಾಹದಲ್ಲಿರುವಾಗಲೇ 1509 ರಲ್ಲಿ ನಿಧನ ಹೊಂದಿದನು. ತನ್ನ ಮರಣಾ ನಂತರ ಎಂಟು ವರ್ಷದ ತನ್ನ ಮಗ ರಾಜ್ಯಕ್ಕೆ ಉತ್ತರಾಧಿಕಾರಿಯಾಗಬೇಕೆಂಬುದು ಆತನ ಬಯಕೆ. ಆದರೆ ತನ್ನ ತಮ್ಮ ಕೃಷ್ಣದೇವರಾಯ ಅದಕ್ಕೆ ಅವಕಾಶ ಕೊಡಲಾರನೆಂಬ ಅನುಮಾನ ಆತನಿಗೆ. ಮರಣಶಯ್ಯೆಯಲ್ಲಿರುವಾಗ ಅವನಿಗೊಂದು ದುರ್ಬುದ್ಧಿಯುಂಟಾಯಿತು. ತನ್ನ ಮಂತ್ರಿ ಸಾಳ್ವ ತಿಮ್ಮನನ್ನು ಕರೆದು ಕೃಷ್ಣದೇವರಾಯನ ಕಣ್ಣುಗಳನ್ನು ಕಿತ್ತಿ ತಂದು ತೋರಿಸುವಂತೆ ಅಪ್ಪಣೆ ಮಾಡಿದನು. ಆದರೆ ಕೃಷ್ಣದೇವರಾಯನಿಗೆ ಬಂದ ವಿಪತ್ತು, ಮಂತ್ರಿ ತಿಮ್ಮರಸನ ಬಾಣಾಕ್ಷತೆಯಿಂದ ಪಾರಾಯಿತು. ಮಂತ್ರಿ ಆಡಿನ ಕಣ್ಣನ್ನು ತರಿಸಿ, ಕೃಷ್ಣದೇವರಾಯನ ಕಣ್ಣುಗಳೆಂದ ಅವನಿಗೆ ತೋರಿಸಿ ಸಮಾಧಾನ ಪಡಿಸಿದನು ಕರ್ನಾಟಕ್ಕೆ ಕೃಷ್ಣದೇವರಾಯನನ್ನು ಉಳಿಸಿಕೊಟ್ಟನು.

for more materials visit www.educationobserver.com/forum

## ವಿಭಾಗ C (ಬರವಣಿಗೆ)

8. ಕೆಳಗಿನವುಗಳಲ್ಲಿ ಒಂದನ್ನು ಕುರಿತು ನಿಮ್ಮ ಅನುಭವವನ್ನು ಬರೆಯಿರಿ : 5

(i) ಶುಭ ಸಮಾರಂಭವೊಂದರಲ್ಲಿ ನೀವು ಭಾಗವಹಿಸಿದಾಗ ...........

(ii) ನೀವು ಕಣ್ಣಾರೆ ಕಂಡ ಭೀಕರ ದುರಂತ ................

9. ಉತ್ತಮ ವೈದ್ಯಕೀಯ ಸೌಲಭ್ಯಗಳಿಲ್ಲದೆ ನಿಮ್ಮ ಊರಿನ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸುತ್ತ ಪತ್ರಿಕಾ ಸಂಪಾದಕರಿಗೊಂದು ಪತ್ರ ಬರೆಯಿರಿ. 5

10. ಕೆಳಗಿನ ಗದ್ಯಭಾಗವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ : 5

ಶಿಶುವು ದೊಡ್ಡ ಕರ್ಕಶ ಧ್ವನಿಯನ್ನು ಕೇಳಿ ಭಯಪಡುತ್ತದೆ. ನಡೆಯಲು ಯತ್ನಿಸುವಾಗ ಬಿದ್ದುಬಿಟ್ಟೇನು ಎಂಬ ಭಯ ಅದನ್ನು ಆವರಿಸುತ್ತದೆ. ಭಯ ಒಂದು ಸ್ವಾಭಾವಿಕ ಹುಟ್ಟುಗುಣ. ನಮ್ಮ ಅಸ್ತಿತ್ವ ಮತ್ತು ಸ್ವಾತಂತ್ರ್ಯಕ್ಕೆ ಬರಬಹುದಾದ ಅಪಾಯದ ಸನ್ನಿವೇಶ ಮತ್ತು ಯೋಚನೆಗಳು ನಮ್ಮಲ್ಲಿ ಭಯವನ್ನುಂಟುಮಾಡುತ್ತವೆ. ಬದುಕಿನ ಸಮಸ್ಯೆಗಳನ್ನು ಎದುರಿಸಲು ಸಾಮರ್ಥ್ಯ, ದಕ್ಷತೆ ಸಾಲದು ಎಂಬ ವ್ಯಕ್ತಿಯು ಭಯಗ್ರಸ್ಥನಾಗುತ್ತಾನೆ. ಕೀಳರಿಮೆಯನ್ನು ಬೆಳೆಸಿಕೊಳ್ಳುತ್ತಾನೆ. ಆದರೆ ಅಪಾಯವನ್ನು ಎದುರಿಸಿ ದಾಟಿದ ಬಳಿಕ ನಿರ್ಭೀತಿಯ ಮನೋಭಾವ, ಆತ್ಮ ವಿಶ್ವಾಸ ವೃದ್ಧಿಯಾಗುತ್ತದೆ. ಮಗು ಏಳುವಾಗ ನಡೆಯುವಾಗ ಮೊದಲು ಹೆದರಿದರೂ, ಕೊನೆಗೆ ನಡೆಯಲು ಅಲ್ಲದೆ ಓಡಲು ಕಲಿಯುತ್ತದೆ. ಆರೋಗ್ಯಕರವಾದ ಭೀತಿ ನಮ್ಮನ್ನು ಜಾಗರೂಕರನ್ನಾಗಿ ಮಾಡುತ್ತದೆ. ಅತಿರಂಜಿತ, ಕಾಲ್ಪನಿಕ ಹಾಗೂ ನಿಷೇಧಾತ್ಮಕ ಭಯ ಕೆಟ್ಟದ್ದು ಎಂಬುದನ್ನು ನಾವು ಅರಿತಿರಬೇಕು. ಅಪಾಯದ ಅರಿವು ಆ ಅಪಾಯವನ್ನು ದಾಟಿಸುವ ವಿಧಾನವನ್ನು ಹುಡುಕಲು ನಮ್ಮನ್ನು ಪ್ರೇರಿಪಿಸುವಂತಿರಬೇಕು. ಈ ನಿಟ್ಟಿನಲ್ಲಿ ಭಯ ನಮಗೊಂದು ಪಂಥಾಹ್ವಾನ ಅಥವಾ ಸವಾಲು.

for more materials visit www.educationobserver.com/forum

## ವಿಭಾಗ D (ಪಠ್ಯಗಳ ಅಧ್ಯಯನ)

11. "ಸುದಾಮೆ ಮಾತಿಗೆ ತಪ್ಪದ ಹೆಣ್ಣು" - ಹೇಗೆ ? ವಿಶದಪಡಿಸಿ. 7

**ಅಥವಾ**

ಕನ್ನಡವು ತನ್ನ ಶಕ್ತಿಯನ್ನು ಹೇಗೆ ಸಂವರ್ಧಿಸಿಕೊಳ್ಳಬೇಕು ?

12. ಕೆಳಗಿನ ಯಾವುದಾದರೂ **ಎರಡು** ವಿಷಯಗಳ ಬಗ್ಗೆ ಟಿಪ್ಪಣಿ ಬರೆಯಿರಿ : *4+4=8*

(i) ಅನಿಸ್ಸಾಳಿಗೆ ನೀಡಿದ ಚಿಕಿತ್ಸೆಗಳು ಹಾಗೂ ಅವುಗಳ ಪರಿಣಾಮವೇನು ?

(ii) ಕಾರಿನ ಚಾಲಕಿ ಸಿಟ್ಟಿನಿಂದ ದೌಡಾಯಿಸಲು ಕಾರಣವೇನು ?

(iii) ಕುವೆಂಪು ಅವರ ಪಕ್ಷಿಪ್ರೇಮವನ್ನು ಕುರಿತು ಬರೆಯಿರಿ.

(iv) ಜೊಹರಾಗೆ ಗಂಡ 'ತಲಾಖ್' ನೀಡಿದ್ದು ಏಕೆ ?

## ಪದ್ಯಭಾಗ

13. 'ಭೀಮಾಲಾಪ'ದಲ್ಲಿ ವ್ಯಕ್ತವಾಗುವ ಭೀಮನ ತೊಳಲಾಟವನ್ನು ವಿವರಿಸಿ. 7

**ಅಥವಾ**

ತಾಯಿಯ ಆತಂಕ, ತಲ್ಲಣಗಳು 'ಮನದೊಳಗೊಳಗೆ ಸತ್ತು ಹುಟ್ಟುತ್ತಿರ್ಪಳು' ಕಾವ್ಯಭಾಗದಲ್ಲಿ ಹೇಗೆ ಮೂಡಿವೆ ? ವಿವರಿಸಿ.

14. ಕೆಳಗಿನ ಯಾವುದಾದರೂ **ಎರಡು** ವಿಷಯಗಳ ಬಗ್ಗೆ ಟಿಪ್ಪಣಿ ಬರೆಯಿರಿ : *4+4=8*

(i) 'ಚಿಃ ಸತ್ತರೇಂ ಪುಟ್ಟರೆ' ಮಾತಿನ ಧ್ವನಿಯನ್ನು ವಿವರಿಸಿ.

(ii) ಶರಣರ ಸೂಳ್ನುಡಿಯ ಮಹತ್ವವನ್ನು ದಾಸಿಮಯ್ಯ ತಿಳಿಸಿರುವ ಬಗೆ.

(iii) ನಿಜವಾದ ಮಂದಿರ, ಮಸೀದಿ, ಇಗರ್ಜಿಗಳು ಇರುವ ಸ್ಥಳ.

(iv) ಹೆಣ್ಣು ಮಗು ಹುಟ್ಟಿದಾಗ ತಂದೆ-ತಾಯಿ ಬಂಧು ವರ್ಗದವರ ಪ್ರತಿಕ್ರಿಯೆ.

for more materials visit www.educationobserver.com/forum

## ನಾಟಕ

15. ಸೈನಿಕರ ಸಂಭಾಷಣೆಯಲ್ಲಿ ಯುದ್ಧದ ಅಪ್ರಯೋಜಕತೆ ಹಾಗೂ ವ್ಯರ್ಥಹಾನಿಗಳು ಹೇಗೆ ವ್ಯಕ್ತವಾಗಿವೆ ? ವಿವರಿಸಿ. 6

ಅಥವಾ

ಅಶ್ವತ್ಥಾಮ ಏಕಲವ್ಯನನ್ನು ಕಂಡು ಮಾತನಾಡಿಸಿ, ಬೆಂಬಲಿಸಿ ಸಮಾಧಾನಪಡಿಸಿದ ಬಗೆಯನ್ನು ವಿವರಿಸಿ.

16. ಕೆಳಗಿನ ಯಾವುದಾದರೂ ಎರಡು ವಿಷಯಗಳ ಬಗ್ಗೆ ಟಿಪ್ಪಣಿ ಬರೆಯಿರಿ : *3+3=6*

(i) ಏಕಲವ್ಯನನ್ನು ಕೌರವರತ್ತ ಸೆಳೆಯಲು ಕರ್ಣ ಮಾಡಿದ ಪ್ರಯತ್ನವನ್ನು ತಿಳಿಸಿ.

(ii) ಏಕಲವ್ಯನ ಬಗೆಗಿನ ದುರ್ಯೋಧನನ ಮನೋಭಾವವನ್ನು ವಿವರಿಸಿ.

(iii) ಯುದ್ಧ ಮಾಡಲು ಯುಧಿಷ್ಠಿರನನ್ನು ಕೃಷ್ಣ ಒಪ್ಪಿಸಿದ ಬಗೆ ತಿಳಿಸಿ.

17. ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ (ಕವಿ-ಕೃತಿ ಹಿನ್ನೆಲೆಯಲ್ಲಿ) ಕೆಳಗಿನ ಯಾರಾದರೂ ಇಬ್ಬರು ಕವಿ, ಕೃತಿ ಪರಿಚಯ ಮಾಡಿಕೊಡಿ : *4+4=8*

(i) ರನ್ನ

(ii) ಹರಿಹರ

(iii) ಜಿ.ಎಸ್. ಶಿವರುದ್ರಪ್ಪ